# ಮದ್ರಸ ಶಿಕ್ಷಣದ ಅಧ್ಯಯನ ವರದಿ

# STUDY REPORT ON MADRASA EDUCATION

## 2014 -15



SIO

# ಮದ್ರಸ ಶಿಕ್ಷಣದ ಅಧ್ಯಯನ ವರದಿ

# STUDY REPORT ON MADRASA EDUCATION

## 2014 -15

sio

MEDIA WATCH

**Students Islamic Organisation of India, Karnataka**

**#7, SRK Garden, Jayanagar East, Bangalore- 56004**
**Ph: 080 26646861 siokarzone@gmail.com www.sio-india.org**

# ಮದ್ರಸ ಶಿಕ್ಷಣ ಒಂದು ಅಧ್ಯಯನ

"ಮದ್ರಸ" ಎಂಬ ಅರಬಿ ಪದದ ಅರ್ಥ "ಶಾಲೆ" ಎಂದಾಗಿದೆ. ಸೌದಿ ಅರೇಬಿಯಾ ಮತ್ತು ಇತರ ದೇಶಗಳಲ್ಲಿ ಶಾಲೆಯನ್ನು ಮದ್ರಸವೆಂದೇ ಕರೆಯುತ್ತಾರೆ. ಇಂದು ಅತ್ಯಂತ ಹೆಚ್ಚು ತಪ್ಪು ಕಲ್ಪನೆಗೆ ಗುರಿಯಾದ ಕೇಂದ್ರವಾಗಿದೆ ಮದ್ರಸ. ಅದಕ್ಕೆ ಹಲವಾರು ಕಾರಣಗಳಿರಬಹುದು. ಆದರೆ ಮಧ್ಯ ಯುಗದ ಚರಿತ್ರೆಯಲ್ಲಿ ನಾಗರಿಕ ಸಮಾಜವನ್ನು ನಿರ್ಮಾಣ ಮಾಡುವಲ್ಲಿ ಬಹಳ ಮುಖ್ಯವಾದ ಪಾತ್ರ ವಹಿಸಿತ್ತು ಮದ್ರಸಗಳು. ದೇಶದ ಶೈಕ್ಷಣಿಕ ಮತ್ತು ರಾಜಕೀಯ ಕ್ಷೇತ್ರದ ಸುಧಾರಣೆಗಾಗಿ ಮದ್ರಸ ನೀಡಿದ ಕೊಡುಗೆಯನ್ನು ಯಾರಿಂದಲೂ ಅಲ್ಲಗಳೆಯಲು ಸಾಧ್ಯವಿಲ್ಲ. ಅದು ಸ್ವಾತಂತ್ರ್ಯ ಹೋರಾಟದ ಸ್ಪೂರ್ತಿಯ ಗೇಹವಾಗಿತ್ತು. ಹಲವಾರು ಚಿಂತಕರ, ಕವಿಗಳ, ಲೇಖಕರ ಹಾಗೂ ಕ್ರಾಂತಿಕಾರಿಗಳ ಬೀಡಾಗಿತ್ತು.

ಆದರೆ ಈ ರೀತಿ ಹೊಸ ಹೊಸ ಬದಲಾವಣೆ ಹಾಗೂ ಆವಿಷ್ಕಾರಗಳಿಗೆ ನೇತೃತ್ವವನ್ನು ಕೊಟ್ಟಂತಹ ಒಂದು ಶಿಕ್ಷಣ ವ್ಯವಸ್ಥೆ ಇಂದು ಕೇವಲ ಧಾರ್ಮಿಕತೆಯ ಬಂಧನದಲ್ಲಿ ಸಿಲುಕಿರುವುದು ಬಹಳ ವಿಷಾದನೀಯ. ಅದು ಇಂದು ತನ್ನ ಗತ ಮತ್ತು ನೈಜ ಪರಿಕಲ್ಪನೆಯನ್ನು ಕಳೆದುಕೊಂಡಿದೆ ಎಂದರೆ ಅತಿಶಯೋಕ್ತಿಯಾಗಲಾರದು. ನಮ್ಮ ರಾಜ್ಯದಲ್ಲಿ 960ಕ್ಕಿಂತಲೂ ಹೆಚ್ಚು ಮದ್ರಸಗಳಿವೆ ಎಂದು ಕರ್ನಾಟಕ ಸರಕಾರದ ಸಮೀಕ್ಷೆಯು ತಿಳಿಸುತ್ತದೆ. ಆದರೆ ಈ ಸಮೀಕ್ಷೆಯಲ್ಲಿ ಪ್ರಾಯಶಃ ಚಿಕ್ಕ ಮಕ್ಕಳಿಗೆ ಕಲಿಸುವ ಮಕ್ತಬಗಳು(ಚಿಕ್ಕ ಮಕ್ಕಳಿಗಾಗಿರುವ ಮದ್ರಸ) ಒಳಪಟ್ಟಿರಬಹುದು, ಹಾಗೂ ಮಸೀದಿಗಳಲ್ಲಿ ಇರುವ 'ಪಳ್ಳಿದರ್ಸ್'ಗಳು(ಮಸೀದಿಯಲ್ಲಿರುವ ಮದ್ರಸ) ಸಮೀಕ್ಷೆಗೆ ಒಳಪಡದಿರಲೂಬಹುದು. ಆದ್ದರಿಂದ ಸರಕಾರದ ಈ ಸಮೀಕ್ಷೆಯನ್ನು 100%ರಷ್ಟು ನಿಖರ ಎನ್ನುವುದು ಕಷ್ಟ. ಈ ನಿಟ್ಟಿನಲ್ಲಿ ಮದ್ರಸದ ಶೈಕ್ಷಣಿಕ ಉನ್ನತಿಯ ಗುರಿಯೊಂದಿಗೆ ಸ್ಟೂಡೆಂಟ್ಸ್ ಇಸ್ಲಾಮಿಕ್ ಆರ್ಗನೈಝೇಷನ್ ಆಫ್ ಇಂಡಿಯಾ, ಕರ್ನಾಟಕ ಘಟಕ ಈ ಹಿಂದೆ 29 ಮದ್ರಸಗಳ ಸಮೀಕ್ಷೆ ನಡೆಸಿ ಒಂದು ವರದಿಯನ್ನು ಬಿಡುಗಡೆ ಗೊಳಿಸಿತ್ತು. ಅದರ ಮುಂದಿನ ಹಂತವಾಗಿ ಹೆಚ್ಚಿನ ಎಲ್ಲಾ ಜಿಲ್ಲೆಗಳ ಎಲ್ಲ ವಿಚಾರಧಾರೆಗೆ ಸಂಬಂಧ ಪಟ್ಟ ಆಯ್ದ ಸುಮಾರು 55 ಮದ್ರಸಗಳ ಸಮೀಕ್ಷೆ ನಡೆಸಿದೆ. ಈ ಸಮೀಕ್ಷೆಯ ಆಧಾರದಲ್ಲಿ ಇನ್ನಿತರ ಮದ್ರಸಗಳಿಗೆ ಪ್ರೇರಣೆ ನೀಡಲು ಹಾಗೂ ಈ ವಿಷಯದಲ್ಲಿ ಪರಸ್ಪರ ಆರೋಗ್ಯದಾಯಕ ಚರ್ಚೆಯನ್ನು ಹುಟ್ಟುಹಾಕುವ ಸಲುವಾಗಿ, ಅತ್ಯುತ್ತಮ ಗುಣಮಟ್ಟದ ಶಿಕ್ಷಣ ನೀಡುತ್ತಿರುವ 6 ಮಾದರಿ ಮದ್ರಸಗಳಿಗೆ ಸನ್ಮಾನ ಸಮಾರಂಭವನ್ನು ಕೂಡಾ ಹಮ್ಮಿಕೊಂಡಿದ್ದೇವೆ. ಈ ಸಮೀಕ್ಷೆಯಲ್ಲಿ ಮೂಲಭೂತ ಸೌಲಭ್ಯಗಳು, ಸಮುದಾಯದ ಪಾಲ್ಗೊಳ್ಳುವಿಕೆ, ಕಲಿಕಾ ಪರಿಸರ, ನವೀನ ಚಟುವಟಿಕೆ, ಅಧ್ಯಾಪಕ ವೃಂದ ಹಾಗೂ ಲೌಕಿಕ ಮತ್ತು ಧಾರ್ಮಿಕ ಶಿಕ್ಷಣದ ಸಮನ್ವಯದ ಆಧಾರದಲ್ಲಿ ಮೌಲ್ಯಮಾಪನ ನಡೆಸಿ ಶೇ.90 ಮತ್ತು ಅದಕ್ಕಿಂತ ಹೆಚ್ಚು ಅಂಕ ಪಡೆದ ಮದ್ರಸಗಳಿಗೆ A+, ಶೇ.80 ಮತ್ತು ಅದಕ್ಕಿಂತ ಹೆಚ್ಚು ಅಂಕ ಗಳಿಸಿದ ಮದ್ರಸಗಳಿಗೆ A, ಶೇ.70 ಮತ್ತು ಅದಕ್ಕಿಂತ ಹೆಚ್ಚು ಅಂಕ ಪಡೆದ ಮದ್ರಸಗಳಿಗೆ B+, ಶೇ.60 ಮತ್ತು ಅದಕ್ಕಿಂತ ಹೆಚ್ಚು ಅಂಕ ಪಡೆದ ಮದ್ರಸಗಳಿಗೆ B, ಶೇ.60ಕ್ಕಿಂತಲೂ

ಕಡಿಮೆ ಅಂಕ ಗಳಿಸಿದ ಮದ್ರಸಕ್ಕೆ C ಶ್ರೇಣಿಯನ್ನು ನೀಡಿದ್ದೇವೆ. ಇದರಲ್ಲಿ ಮೂಲಭೂತ ಸೌಕರ್ಯಗಳಾದ ನೀರು, ಆಹಾರ, ಆಟದ ಮೈದಾನ, ವಸತಿ ಸೌಲಭ್ಯ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಲಭ್ಯತೆ, ಸ್ವಚ್ಛ ಪರಿಸರ, ಮುಂತಾದ ಸೌಕರ್ಯವಿರುವ ಮದ್ರಸಕ್ಕೆ 60 ಅಂಕ, ಅದರೊಂದಿಗೆ ಧಾರ್ಮಿಕ ಶಿಕ್ಷಣ ಮತ್ತು ಲೌಕಿಕ ಶಿಕ್ಷಣವನ್ನು ಸಮನ್ವಯವಾಗಿ ನೀಡುವ ಮದ್ರಸಕ್ಕೆ 70 ಅಂಕ, ಇವುಗಳೆಲ್ಲದರ ಜತೆ ಕ್ರೀಡೋಪಕರಣಗಳು, ಲೈಬ್ರರಿ, ಕಂಪ್ಯೂಟರ್ ಶಿಕ್ಷಣ ಮತ್ತು ಪ್ರಥಮ ಚಿಕಿತ್ಸೆಯ ಸೌಲಭ್ಯವಿದ್ದರೆ 80 ಹಾಗೂ ನವೀನ ಚಟುವಟಿಕೆ, ನುರಿತ ಅಧ್ಯಾಪಕ ವೃಂದ, ಭಾಷಾ ತರಬೇತಿ, ದೈಹಿಕ ಶಿಕ್ಷಕ ಮತ್ತು ಸುಸಜ್ಜಿತ ಕ್ಯಾಂಪಸ್ ವ್ಯವಸ್ಥೆ ಇದ್ದರೆ 90 ಅಂಕವನ್ನು ನೀಡಿದ್ದೇವೆ.

ನಮ್ಮ ಪ್ರತಿನಿಧಿ ರಾಜ್ಯದ ಹಲವಾರು ಮದ್ರಸಾಗಳಿಗೆ ಭೇಟಿ ನೀಡಿ ಅಲ್ಲಿಯ ಶೈಕ್ಷಣಿಕ ಪರಿಸ್ಥಿತಿಯ ಬಗ್ಗೆ ಅಧ್ಯಯನ ಮತ್ತು ಅಲ್ಲಿನ ಅಧ್ಯಾಪಕ, ವಿದ್ಯಾರ್ಥಿಗಳು ಮತ್ತು ಮದ್ರಸದ ಕುರಿತು ಊರಿನ ಜನರಿಗಿರುವ ಅಭಿಪ್ರಾಯ ಹಾಗೂ ಅಲ್ಲಿನ ಮದ್ರಸಗಳಿಗೆ ಊರಿನ ಜನರ ಮೇಲಿರುವ ಅಭಿಪ್ರಾಯವನ್ನು ವಿವರವಾಗಿ ಕೇಳಿ ತಿಳಿದುಕೊಂಡ ಪರಿಣಾಮ ಈ ಕೆಳಗಿನ ಸೂಕ್ಷ್ಮ ವಿಚಾರವು ನಮ್ಮ ಗಮನಕ್ಕೆ ಬಂತು.

- ಹೆಚ್ಚಿನ ಮದ್ರಸಗಳಲ್ಲಿ ಪ್ರಾಥಮಿಕ ಸೌಕರ್ಯಗಳ ಕೊರತೆ ಇದೆ.
- ಮದ್ರಸಗಳಲ್ಲಿ ಕಲಿಯುವ ಹಲವಾರು ವಿದ್ಯಾರ್ಥಿಗಳಲ್ಲಿ ಹಾಗೂ ಶಿಕ್ಷಕ ವೃಂದದವರಲ್ಲಿ ಕೀಳರಿಮೆ ಅಂಶ ಕಂಡುಬರುತ್ತದೆ. ಕಾರಣ ಇಂತಹ ಮದ್ರಸದಲ್ಲಿ ಕಲಿತ ನಂತರ ವಿದ್ಯಾರ್ಥಿಗಳು ಯಾವುದೋ ಇನ್ನೊಂದು ಮದ್ರಸ ಅಥವಾ ಮಸೀದಿಗಳಲ್ಲಿ ಬಹಳ ಕಡಿಮೆ ವೇತನಕ್ಕಾಗಿ ಸೇವೆ ಸಲ್ಲಿಸಬೇಕಾಗುತ್ತದೆ. ಸಾಮಾಜಿಕ ರಂಗದ ಯಾವುದೇ ಚಟುವಟಿಕೆಗಳಲ್ಲಿ ಗುರುತಿಸಿಕೊಳ್ಳದಿರುವುದರಿಂದ ಸಮಾಜದ ಮುಖ್ಯವಾಹಿನಿಯಿಂದ ಇವರು ದೂರ ಸರಿದಿದ್ದಾರೆ.
- ಮದ್ರಸದ ಬಗ್ಗೆ ಇಂದು ಮಾಧ್ಯಮಗಳು ಸೃಷ್ಟಿಸಿರುವ ಅಪಪ್ರಚಾರದಿಂದಾಗಿ ಮದ್ರಸ ವಿಧ್ಯಾರ್ಥಿಗಳಲ್ಲಿ ತಮ್ಮ ಬಗ್ಗೆ ಒಂದು ರೀತಿಯ ಭಯ ಮತ್ತು ಆತಂಕ ಮೂಡಿದೆ. ಅಲ್ಲಿ ನಿಗೂಢತೆ ಅಡಗಿರುವಂತೆ ಬಿಂಬಿಸಿ ಜನರನ್ನು ಭಯಭೀತರನ್ನಾಗಿಸಲಾಗುತ್ತದೆ. ಈ ರೀತಿಯ ತಪ್ಪು ಕಲ್ಪನೆಗಳನ್ನು ನಿರಂತರ ಮಾಧ್ಯಮದ ಮೂಲಕ ಬಿತ್ತರಿಸಿ ಜನರನ್ನು ಅದರ ವಿರೋಧಿಗಳಾಗುವಂತೆ ಮಾಡಲಾಗುತ್ತದೆ.

  ನಮ್ಮ ಪ್ರತಿನಿಧಿ ಹುಬ್ಬಳ್ಳಿಯ ಪ್ರತಿಷ್ಠಿತ ಮದ್ರಸಕ್ಕೆ ಭೇಟಿ ನೀಡಿದಾಗ ಆ ಮದರಸದ ಪ್ರಾಂಶುಪಾಲರು ಒಂದು ಬೇಸರದ ಸಂಗತಿಯನ್ನು ನಮ್ಮ ಮುಂದೆ ಬಿಚ್ಚಿಟ್ಟರು. ಪ್ರತೀ ವಾರ ಮದ್ರಸಕ್ಕೆ ಐ.ಬಿ. ಮತ್ತು ಪೊಲೀಸರು ಬಂದು ಮದ್ರಸದ ಹಾಜರಿಯನ್ನು ಹಾಗೂ ತರಗತಿ ಕೊಠಡಿಯನ್ನು ಪರಿಶೀಲಿಸುತ್ತಾರೆ. ಪೊಲೀಸರ ಈ ಕಾಟದ ಕಾರಣಕ್ಕೆ ಮಕ್ಕಳು ಕೂಡ ಮದ್ರಸಕ್ಕೆ ಬರುವಾಗ ಏನೋ ಒಂದು ರೀತಿಯ ಭಯ ಮನದಲ್ಲಿ ಹೊತ್ತು ಬರುತ್ತಾರೆ. ಇದರ ಕಾರಣದಿಂದ ಮಕ್ಕಳ ಸಂಖ್ಯೆ ಕೂಡಾ ತೀರಾ ಕುಸಿದಿದೆ ಮಾತ್ರವಲ್ಲ ಮಕ್ಕಳ ಹೆತ್ತವರು ಸಹ ಮದ್ರಸಕ್ಕೆ ಬರಲು ಹೆದರುತ್ತಾರೆ ಎಂದರು.
- ಮದ್ರಸಗಳಲ್ಲಿ ವಿದ್ಯಾರ್ಥಿಗಳ ದೈಹಿಕ ಆರೋಗ್ಯಕ್ಕಾಗಿ ಕ್ರೀಡೆಗಳಿಗೆ ಪ್ರೋತ್ಸಾಹವಿಲ್ಲ. ಅದಕ್ಕೆ ತಕ್ಕುದಾದ ಮೈದಾನದ ವ್ಯವಸ್ಥೆಯಿಲ್ಲ. ಕೆಲವೆಡೆಗಳಲ್ಲಿ ಇದ್ದರೂ ಕೂಡಾ ಅದರ ಉಪಯೋಗ ಸರಿಯಾಗಿ ನಡೆಯುತ್ತಿಲ್ಲ. ಅಲ್ಲದೆ ಅದನ್ನು ಕಲಿಸಲು ದೈಹಿಕ ಶಿಕ್ಷಕರಿಲ್ಲ. ಆದ್ದರಿಂದ ಸಮುದಾಯದ ನೇತಾರರು ಈ ಬಗ್ಗೆ ಚರ್ಚಿಸಿ ಕ್ರೀಡೆಗೆ ಮಹತ್ವ ಕೊಡಬೇಕಾಗಿದೆ.
- ಹಲವು ಮದ್ರಸಗಳಲ್ಲಿ ವಸತಿ ಸೌಲಭ್ಯದ ಕೊರತೆ ಇದೆ. ಒಂದೇ ಕೊಠಡಿಯಲ್ಲಿ ಸುಮಾರು 20 ಮಕ್ಕಳು ಚಾಪೆ ಹಾಸಿ ಮಲಗುವುದನ್ನು ಕಾಣುವಾಗ ಯಾರಿಗೂ ಕನಿಕರವಾದೀತು.
- ಮದ್ರಸಾದ ಪರಿಸರದಲ್ಲಿರುವ ಜನರು ಈ ಬಗ್ಗೆ (ಮದ್ರಸಾದ ಸಮಸ್ಯೆಗಳ) ಹೆಚ್ಚಿನ ಚರ್ಚೆ ನಡೆಸುವುದಿಲ್ಲ.
- ಮದ್ರಸಾದಲ್ಲಿ ಕಲಿತವರಲ್ಲಿ ಸಮಾಜದೊಂದಿಗೆ ಬೆರೆಯಲು ಮತ್ತು ತಮ್ಮ ಅಗತ್ಯಗಳಿಗಾಗಿ ಸಾರ್ವಜನಿಕ ಸಂವಹನ ನಡೆಸಲು ಭಾಷೆಯ ಕೊರತೆ ಎದ್ದು ಕಾಣುತ್ತಿದೆ.

**ಕಾಲ ಪರಿಮಿತಿ:**

ನಮಗೆ ತಿಳಿದಿರುವಂತೆ ಮದ್ರಸಗಳಲ್ಲಿ ವಿವಿಧ ರೀತಿಯ ಪಠ್ಯಕ್ರಮಗಳನ್ನು ಕಲಿಸಲಾಗುತ್ತದೆ. ಬಾಲಕರ ಆಲಿಮೀಯತ್ ಪದವಿ ಶಿಕ್ಷಣದ ಕಾಲಾವಧಿಯು ಕೆಲವು ಕಡೆಗಳಲ್ಲಿ 6 ವರ್ಷಗಳಾದರೆ ಇನ್ನೂ ಕೆಲವೆಡೆಗಳಲ್ಲಿ 10/12 ವರ್ಷಗಳ ಕೋರ್ಸ್‌ಗಳೂ ಇದೆ. ಆದರೆ ಕೆಲವು ಕಡೆಗಳಲ್ಲಿ ಬಾಲಕಿಯರಿಗೆ ದಾಯಿ, ಮುಅ್‌ಮಿನ್, ಫಹ್‌ಮುಲ್ ಕುರ್‌ಆನ್‌ನಂತಹ ಕೋರ್ಸ್‌ಗಳು ಕೇವಲ 2,3 ಅಥವಾ 4 ವರ್ಷಗಳಲ್ಲಿ ಕಲಿಸಲಾಗುತ್ತದೆ. ಅದರಲ್ಲಿ ಅವರಿಗೆ ಧಾರ್ಮಿಕ ಜ್ಞಾನವನ್ನಲ್ಲದೆ ಟೈಲರಿಂಗ್ ಕ್ಯಾಲಿಯೊಗ್ರಾಫಿಯಂತಹ ಇತರ ಜೀವನೋಪಾಯದ ವಿಷಯವನ್ನು ಕಲಿಸಲಾಗುತ್ತದೆ. ಆದ್ದರಿಂದ ಬಾಲಕರ ಕೋರ್ಸ್‌ನ ಕಾಲಾವಧಿಯನ್ನು ಸಹ ಕಡಿತಗೊಳಿಸಿದರೆ ಉತ್ತಮ ಎಂಬುದು ನಮ್ಮ ಅಭಿಮತ. ಈ ಬಗ್ಗೆ ನಾವು ಹಲವು ಧರ್ಮ ಗುರುಗಳಲ್ಲಿ ಚರ್ಚಿಸಿದೆವು. ಆದರೆ ಯಾವುದೇ ಫಲ ದೊರೆಯಲಿಲ್ಲ. ಕಾರಣ ಅವರು ಸಾಂಪ್ರದಾಯಿಕ ಶಿಕ್ಷಣ ಪದ್ಧತಿಯನ್ನು ಅನುಸರಿಸುವವರಾಗಿದ್ದರು. ಕೊನೆಯದಾಗಿ ಮಂಗಳೂರಿನ 'ಇಕ್ರ' ಅರಬಿಕ್ ಸ್ಕೂಲ್'ನ ಸಂಚಾಲಕರಾದ ಮೌ| ಸಾಲಿಮ್ ನದ್‌ವಿಯವರೊಂದಿಗೆ ಚರ್ಚಿಸಿದಾಗ ಅವರು "ನಾವು ಮಕ್ಕಳ ಸಮಯ ಯಾವ ಸಂದರ್ಭದಲ್ಲಿ ಪೋಲಾಗುತ್ತದೆ ಎಂದು ತಿಳಿದಿದ್ದೇವೆ. ಆದ್ದರಿಂದ ನಾವು ಆ ಸಮಯದಲ್ಲಿ ಮಕ್ಕಳಿಗೆ ಲೌಕಿಕ ಶಿಕ್ಷಣವನ್ನು ನೀಡುತ್ತೇವೆ. ಧಾರ್ಮಿಕ ಹಾಗೂ ಲೌಕಿಕ(ಶಾಲೆ) ಶಿಕ್ಷಣದಲ್ಲಿ ನಮ್ಮ ಮಕ್ಕಳು ಪ್ರಗತಿ ಸಾಧಿಸಿದ್ದಾರೆ. ಇದರಿಂದ ನಮಗೆ ಉತ್ತಮ ಕಲಿಕೆಯ ರೂಪ ದೊರೆತಿದೆ" ಎಂದರು.

ಕರ್ನಾಟಕದ ಮದ್ರಸಗಳಲ್ಲಿ ಸಹಸ್ರಾರು ಮಕ್ಕಳು ಅರಬಿಯಲ್ಲಿ(ಬಿ.ಎ.) ಆಲಿಮೀಯತ್ ಪದವಿಯನ್ನು ಪಡೆಯುತ್ತಾರೆ. ಆದರೆ ಎಮ್.ಎ. ಅರಬಿಕ್ ಕಲಿಯುವ ಮಕ್ಕಳು ತುಂಬಾ ವಿರಳ. ಅದು ಕೂಡಾ ಮದ್ರಾಸ್ ವಿಶ್ವವಿದ್ಯಾಲಯದ ಬ್ರಾಂಚ್‌ನಲ್ಲಿ ಒಂದಿಬ್ಬರು ಎಮ್.ಎ. ಅರಬಿಗೆ ಪರೀಕ್ಷೆ ಬರೆಯುತ್ತಿದ್ದಾರೆ. ಅಂದರೆ ಇಷ್ಟೆಲ್ಲ ಮಕ್ಕಳು ಬಿ.ಎ.(ಆಲಿಮೀಯತ್) ಓದುತ್ತಿರುವಾಗ ಅವರ ಉನ್ನತ ಶಿಕ್ಷಣಕ್ಕಾಗಿ ಕರ್ನಾಟಕದ ವಿಶ್ವವಿದ್ಯಾಲಯಗಳಲ್ಲಿ ಯಾವುದೇ ವ್ಯವಸ್ಥೆ ಇಲ್ಲ ಎಂಬುದು ಬೇಸರದ ಸಂಗತಿ. ಇನ್ನು ಮದ್ರಸದಲ್ಲಿ ಕಲಿತ ಬಿ.ಎ.(ಆಲಿಮೀಯತ್)ಯನ್ನು ಕರ್ನಾಟಕದ ಯಾವುದೇ ವಿಶ್ವವಿದ್ಯಾಲಯವು ಅಂಗೀಕರಿಸುವುದಿಲ್ಲ. ಏಕೆಂದರೆ ಅವರಲ್ಲಿ ಅರಬೀ ಕಲಿಸಲು ಯಾವುದೇ ವ್ಯವಸ್ಥೆ ಇಲ್ಲ. ಆದ್ದರಿಂದ ಕೇರಳದ ಹಲವು ವಿಶ್ವವಿದ್ಯಾಲಯಗಳಂತೆ ಇಲ್ಲಿಯೂ ಮೂರು ವರ್ಷದ ಅರಬಿ ಬಿ.ಎ. ಕೋರ್ಸ್‌ಗಳನ್ನು ಪ್ರಾರಂಭಿಸಬೇಕು. ಹಾಗೆಯೇ ಸ್ನಾತಕೋತ್ತರ ಪದವಿ ಅಧ್ಯಯನ ವ್ಯವಸ್ಥೆಯನ್ನು ಸರಕಾರ ಶೀಘ್ರವಾಗಿ ಆರಂಭಿಸಬೇಕು. ರಾಜ್ಯ ಸರಕಾರದ ಎಲ್ಲಾ ವಿಶ್ವವಿದ್ಯಾಲಯಗಳು ಅರಬೀ ಅಧ್ಯಯನ ಪೀಠವನ್ನು ಪ್ರಾರಂಭಿಸುವುದರಿಂದ ಈಗಿನ ಹಲವಾರು ಸಮಸ್ಯೆಗಳಿಗೆ ಪರಿಹಾರವಾಗುತ್ತದೆ.

ಶಿಕ್ಷಕರು: ಇನ್ನು ಮದ್ರಸದ ಶಿಕ್ಷಕರ ಸಂಖ್ಯೆಯ ಪ್ರಮಾಣ ವಿದ್ಯಾರ್ಥಿಗಳ ಅನುಪಾತಕ್ಕೆ ಅನುಗುಣವಾಗಿದೆ. ಆದರೆ ಶಿಕ್ಷರಲ್ಲಿ ಬಹುತೇಕ ಮಂದಿ ಲೌಕಿಕ ಶಿಕ್ಷಣ ಪಡೆದಿಲ್ಲ. ಕೇವಲ ಧಾರ್ಮಿಕ ಜ್ಞಾನದ ಹೊರತು ಸಾಮಾಜಿಕ ಆಗು ಹೋಗುಗಳಿಂದ ಅಜ್ಞರಾಗಿದ್ದಾರೆ. ಇದರಿಂದಾಗಿ ಮದ್ರಸದ ವಿದ್ಯಾರ್ಥಿಗಳು ಸಮಾಜದ ಮುಖ್ಯವಾಹಿನಿಗೆ ಬರುವುದಿಲ್ಲ.

ಅದೇ ರೀತಿ ಶಿಕ್ಷಕರ ವೇತನವನ್ನು ಗಮನಿಸಿದರೆ ಬಹಳ ಬೇಸರವಾಗಬಹುದು. ಗ್ರಾಮೀಣ ಪ್ರದೇಶದ ಶಿಕ್ಷಕರು ಕೇವಲ 3000/4000 ವೇತನ ಪಡೆಯುತ್ತಿದ್ದಾರೆ. ನಗರ ಪ್ರದೇಶದಲ್ಲಾದರೂ ಉತ್ತಮ ವೇತನ ಅಂದರೆ 5ರಿಂದ 8 ಸಾವಿರದ ವರೆಗೆ ನೀಡುತ್ತಾರೆ. ಇಷ್ಟು ಕಡಿಮೆ ಸಂಬಳದಲ್ಲಿ ಅವರ ಜೀವನ ನಿರ್ವಹಣೆಯು ಕಷ್ಟ ಸಾಧ್ಯ. ಈ ನಿಟ್ಟಿನಲ್ಲಿ ಸಮುದಾಯ ಗಮನ ಹರಿಸಬೇಕು.

**ಶುಚಿತ್ವ:**

ಇನ್ನು ಮದ್ರಸದ ಶುಚಿತ್ವದ ಬಗ್ಗೆ ಹೇಳುವುದಾದರೆ, ನಾವು ಈಗಾಗಲೇ ಸಮೀಕ್ಷೆ ನಡೆಸಿದ ಬಹಳಷ್ಟು ಮದ್ರಸಗಳು ಶುಚಿತ್ವದ ವಿಚಾರದಲ್ಲಿ ಬಹಳ ಶೋಚನೀಯ ಸ್ಥಿತಿಯಲ್ಲಿವೆ. ಬೀದರ್ ಮತ್ತು ರಾಯಚೂರ್‌ನಲ್ಲಿ ಎರಡು ಬಾಲಕಿಯರ ಮದ್ರಸದ ಸುತ್ತಲೂ ತೆರೆದ ಡ್ರೈನೇಜ್‌ನಿಂದಾಗಿ ವಿಪರೀತ ವಾಸನೆ ಬರುತ್ತಿತ್ತು. ಈ

ವಿಚಾರವಾಗಿ ಅಲ್ಲಿನ ಮದ್ರಸದ ವ್ಯವಸ್ಥಾಪಕರೊಂದಿಗೆ ಪ್ರಶ್ನಿಸಿದಾಗ, ಅವರು ನಾವು ಬಹಳಷ್ಟು ಸಲ ಇಲ್ಲಿನ ಕೌನ್ಸಿಲರ್‌ಗೆ ಹೇಳಿದ್ದೇವೆ, ಆದರೆ ಯಾವುದೇ ಫಲವಿಲ್ಲ ಎಂದರು. "ಶುಚಿತ್ವವು ಧರ್ಮದ ಅರ್ಧಾಂಶವಾಗಿದೆ" ಎಂದು ಭೋಧಿಸುವ ಮದ್ರಸಗಳೇ ಶುಚಿತ್ವವನ್ನು ಮೈಗೂಡಿಸದಿದ್ದರೆ ಇನ್ನು ಆ ಮದ್ರಸದಲ್ಲಿ ಕಲಿತ ಮಕ್ಕಳು ಸಮುದಾಯಕ್ಕೆ ಶುಚಿತ್ವದ ಬಗ್ಗೆ ಯಾವ ರೀತಿ ಪಾಠ ಹೇಳುವರು.

ಪ್ರೀತಿ ಮತ್ತು ಹಿತಾಕಾಂಕ್ಷೆಯಿಂದ ಮಾತ್ರವೇ ಭೋಧನೆ ಸಾಧ್ಯ ಎಂಬುವುದು ಇಂದು ಎಲ್ಲರಿಗೂ ತಿಳಿದ ವಿಚಾರ.

ಇನ್ನು ಇಸ್ಲಾಂ ಭೋಧನೆಯಲ್ಲಿ ಶಿಕ್ಷೆಯನ್ನು ಎಲ್ಲೂ ಪ್ರೋತ್ಸಾಹಿಸಿಲ್ಲ. ಧಾರ್ಮಿಕ ಜ್ಞಾನ ಕಲಿಯಬೇಕಾದರೆ ದಂಡನೆ ಅನಿವಾರ್ಯ ಎಂಬ ವಾದ ಬಾಲಿಶವಾಗಿದೆ. ಪ್ರವಾದಿ ಮುಹಮ್ಮದ್(ಸ)ರು ತಮ್ಮ ಅನುಚರರಿಗೆ ಇಸ್ಲಾಮೀ ಪಾಠವನ್ನು ಹೇಳಿಕೊಡುವಾಗ ಎಲ್ಲೂ ದೈಹಿಕವಾಗಿ ದಂಡಿಸಿದ ಒಂದೇ ಒಂದು ಉದಾಹರಣೆಯು ಚರಿತ್ರೆಯಲ್ಲಿ ಕಾಣಲು ಸಾಧ್ಯವಿಲ್ಲ.

## 55 ಮದ್ರಸಗಳ ಮೂಲಭೂತ ಸೌಕರ್ಯಗಳ ಮಾಹಿತಿ

- ಗ್ರಂಥಾಲಯಗಳು – ಶೇ.21.81 ಮದ್ರಸಾಗಳಲ್ಲಿ ಇದೆ.
- ಪ್ರಥಮ ಚಿಕಿತ್ಸೆಯ ಔಷದೋಪಕರಗಳು – ಶೇ.12.72 ಮದ್ರಸಾಗಳಲ್ಲಿ ಇದೆ.
- ವಿಶೇಷ ಚಟುವಟಿಕೆಗಳು – ಶೇ.9.09 ಮದ್ರಸಾಗಳಲ್ಲಿ ನಡೆಸಲಾಗುತ್ತದೆ.
- ಕಂಪ್ಯೂಟರ್ – ಶೇ.18.18 ಮದ್ರಸಾಗಳಲ್ಲಿ ಇದೆ.
- ಕುಡಿಯುವ ನೀರಿನ ಸೌಲಭ್ಯ – ಶೇ.72.72 ಮದ್ರಸಾಗಳಲ್ಲಿ ಇದೆ.
- ಇಂಗ್ಲಿಷ್ ಅಧ್ಯಯನ – ಶೇ.43.68 ಮದ್ರಸಾಗಳಲ್ಲಿ ಇದೆ.
- ಗಣಿತ, ವಿಜ್ಞಾನ, ಸಮಾಜ ವಿಜ್ಞಾನ – ಶೇ.18.18 ಮದ್ರಸಾಗಳಲ್ಲಿ ಇದೆ.
- ಕನ್ನಡ – ಶೇ.43.63 ಮದ್ರಸಾಗಳಲ್ಲಿ ಇದೆ.
- ಸ್ವಂತ ಕಟ್ಟಡ – ಶೇ.82.85 ಮದ್ರಸಾಗಳಲ್ಲಿ ಇದೆ.
- ಸುಸಜ್ಜಿತ ಪೀಠೋಪಕರಣ – ಶೇ.50.90 ಮದ್ರಸಾಗಳಲ್ಲಿ ಇದೆ.
- ಆಟದ ಮೈದಾನ – ಶೇ.41.81 ಮದ್ರಸಾಗಳಲ್ಲಿ ಇದೆ.
- ದೈಹಿಕ ಶಿಕ್ಷಕರು – ಶೇ.10.90 ಮದ್ರಸಾಗಳಲ್ಲಿದ್ದಾರೆ.
- ಕ್ರೀಡೋಪಕರಣಗಳು – ಶೇ.23.63 ಮದ್ರಸಾಗಳಲ್ಲಿ ಇದೆ.

## 55 ಮದ್ರಸಗಳ ಶ್ರೇಣೀಕೃತ ಮಾಹಿತಿ

| ಅಂಕ | ಮದ್ರಸಗಳ ಸಂಖ್ಯೆ | ಶ್ರೇಣಿ |
|---|---|---|
| 90 | 0 | A+ |
| 80 | 4 | A |
| 70 | 4 | B+ |
| 60 | 9 | B |
| 50 | 38 | C |

## ಕೆಲವು ಉತ್ತಮ ಮದ್ರಸಗಳು:

**ಮದ್ರಸ ಬೈತುಲ್ ಉಲೂಂ, ಸಿಂಧಗಿ**

ಬಿಜಾಪುರ ಜಿಲ್ಲೆಯ ಸಿಂದಗಿ ಎಂಬ ಸ್ಥಳದಲ್ಲಿರುವ ಈ ಮದ್ರಸದಲ್ಲಿ 400 ಹೆಣ್ಣು ಮತ್ತು 200 ಗಂಡು ಮಕ್ಕಳು ಓದುತ್ತಿದ್ದಾರೆ. ಅಲ್ಲಿ ವಿಶಾಲವಾದ ಆಟದ ಬಯಲು, ಉತ್ತಮ ಲೈಬ್ರರಿ, ಕಂಪ್ಯೂಟರ್ ಲ್ಯಾಬ್ ಮುಂತಾದ ಸುಸಜ್ಜಿತ ವ್ಯವಸ್ಥೆ ಇದೆ. ಇಂಗ್ಲೀಷ್, ಕನ್ನಡ, ವಿಜ್ಞಾನ, ಗಣಿತ, ಸಮಾಜ, ಹೀಗೆ ಲೌಕಿಕ ಮತ್ತು ಧಾರ್ಮಿಕ ಶಿಕ್ಷಣವನ್ನು ಕಲಿಯುವ ಶಾಂತ ವಾತಾವರಣವು ಈ ಮದ್ರಸದ ವಿಶೇಷತೆ.

**ವಿಶೇಷತೆಗಳು:**

- ಹೆಣ್ಣು ಮತ್ತು ಗಂಡು ಮಕ್ಕಳಿಗೆ ಬೇರೆ ಬೇರೆ ವ್ಯವಸ್ಥೆ ಇದ್ದರೂ ಇಬ್ಬರಿಗೂ ಗುಣಮಟ್ಟದ ಶಿಕ್ಷಣ ನೀಡಲು ಈ ಸಂಸ್ಥೆಯು ಬದ್ಧವಾಗಿದೆ.
- ಇಲ್ಲಿ ಭಾಷೆಯನ್ನು ಪ್ರತಿಭೆಯ ರೂಪದಲ್ಲಿ ಕಲಿಸಲಾಗುತ್ತದೆ. ಇದರಿಂದಾಗಿ 3ನೇ 4ನೇ ತರಗತಿಯ ವಿದ್ಯಾರ್ಥಿಗಳು ಬಹಳ ಸ್ಪಷ್ಟವಾಗಿ ಉರ್ದು ಭಾಷೆಯನ್ನು ಓದಲು ಮತ್ತು ಬರೆಯ ಬಲ್ಲರು. ಜತೆಗೆ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳನ್ನೂ ಕಲಿಯುತ್ತಿದ್ದಾರೆ.
- ಈ ಮದ್ರಸದಲ್ಲಿ 400 ಹೆಣ್ಣು ಮಕ್ಕಳಿಗೆ 22 ಕೊಠಡಿಗಳು ಮತ್ತು 25 ಉಪನ್ಯಾಸಕಿಯರು ಹಾಗೂ 200 ಗಂಡು ಮಕ್ಕಳಿಗೆ 16 ಕೊಠಡಿಗಳು ಮತ್ತು 20 ಉಪನ್ಯಾಸಕರು, ಅಂದರೆ ಪ್ರತೀ 18 ಹೆಣ್ಣು ಮಕ್ಕಳಿಗೆ ಒಂದು ಕೊಠಡಿ ಮತ್ತು ಪ್ರತೀ 16 ಮಕ್ಕಳಿಗೆ ಒಬ್ಬ ಉಪನ್ಯಾಸಕಿ ಹಾಗೆಯೇ ಪ್ರತೀ 12 ಗಂಡು ಮಕ್ಕಳಿಗೆ ಒಂದು ಕೊಠಡಿ ಮತ್ತು ಪ್ರತೀ ಹತ್ತು ಮಕ್ಕಳಿಗೆ ಒಬ್ಬ ಉಪನ್ಯಾಸಕನ ವ್ಯವಸ್ಥೆ ಇದೆ.
- ವರ್ಷವಿಡೀ ಇಲ್ಲಿ ದಾಖಲಾತಿ ನಡೆಯುತ್ತದೆ. ಇದರಿಂದಾಗಿ ಮಕ್ಕಳಿಗೆ ಶಿಕ್ಷಣದ ಬಾಗಿಲನ್ನು ಸದಾ ತೆರೆದಿಡಲು ಸಾಧ್ಯವಾಗಿದೆ.
- 8 ವರ್ಷದ ಪಠ್ಯಕ್ರಮ ಇರುವ ಮದ್ರಸವಾದರೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಕೇವಲ 5 ವರ್ಷದಲ್ಲೇ ಮುಗಿಸುವ ಅವಕಾಶವನ್ನು ಒದಗಿಸಲಾಗುತ್ತದೆ.

ಇನ್ನು ಶುಚಿತ್ವ ಕಾರ್ಯದಲ್ಲಿ ಇತರೆ ಸಂಸ್ಥೆಗಳಿಗೆ ಹೋಲಿಸಿದರೆ ಈ ಸಂಸ್ಥೆ ಶುಚಿತ್ವದ ಕಡೆಗೆ ಹೆಚ್ಚಿನ ಗಮನ ಹರಿಸಿದೆ.

**ಮದ್ರಸ ಜಿಯಾಉಲ್ ಉಲೂಂ, ಕಂಡ್ಲೂರು**

ಕುಂದಾಪುರ ತಾಲೂಕಿನ ಕಂಡ್ಲೂರು ಎಂಬ ಸ್ಥಳದಲ್ಲಿರುವ ಈ ಮದ್ರಸವು ಸ್ವತಃ ತನ್ನದೇ ಆದ ಕಟ್ಟಡ, ಪಕ್ಕದಲ್ಲೇ ಇರುವ ವಿಶಾಲವಾದ ಆಟದ ಮೈದಾನ, ಅಚ್ಚುಕಟ್ಟಾದ ಲೈಬ್ರರಿ ಹಾಗೂ ಶಾಂತ ಮತ್ತು ಸ್ವಚ್ಛ ಕ್ಯಾಂಪಸ್‌ನಿಂದಾಗಿ ಎಲ್ಲರ ಗಮನ ಸೆಳೆಯುತ್ತದೆ. 120 ಮಕ್ಕಳು ಕಲಿಯುತ್ತಿರುವ ಈ ಮದ್ರಸದಲ್ಲಿ 12 ಅಧ್ಯಾಪಕರು ಇದ್ದಾರೆ ಅಂದರೆ ಪ್ರತೀ 10 ಮಕ್ಕಳಿಗೆ ಓರ್ವ ಅಧ್ಯಾಪಕ.

**ವಿಶೇಷತೆಗಳು:**

- 30 ವಿದ್ಯಾರ್ಥಿಗಳು ಎಮ್.ಎ.ಎನ್.ಯು(ಮಾನು)ದಿಂದ ಬಿ.ಎ. ಪದವಿ ಓದುತ್ತಿದ್ದಾರೆ.
- ವಿದ್ಯಾರ್ಥಿಗಳಿಗೆ ಪ್ರತೀ ದಿನ ಕನ್ನಡ ಮತ್ತು ಇಂಗ್ಲೀಷ್ ದಿನ ಪತ್ರಿಕೆಗಳನ್ನು ಓದುವ ವಾಚನಾಲಯದ ವ್ಯವಸ್ಥೆ ಇದೆ.

- ಕೊನೆಯ ವರ್ಷದ ಆಲಿಮೀಯತ್‌ನಲ್ಲಿ ಓದುತ್ತಿರುವ ಬಹಳಷ್ಟು ವಿದ್ಯಾರ್ಥಿಗಳು ಅರಬೀ ಮಾತನಾಡಲು ಬಲ್ಲರು.
- ಮಕ್ಕಳಿಗೆ ಉತ್ತಮ ಬರವಣಿಗೆಯನ್ನು ಕಲಿಸುವ ನಿಟ್ಟಿನಲ್ಲಿ ಮದ್ರಸದ ವತಿಯಿಂದ ಪ್ರತೀ ವಾರ ಒಂದು ಗೋಡೆ ಪತ್ರಿಕೆಯನ್ನು ರಚಿಸಲಾಗುತ್ತದೆ.
- ಸಾಮಾಜಿಕ ಮತ್ತು ರಾಜಕೀಯ ಆಗುಹೋಗುಗಳ ಕುರಿತು ಚರ್ಚಾಕೂಟಗಳನ್ನು ಹಮ್ಮಿಕೊಳ್ಳಲಾಗುತ್ತದೆ.
- ಅಧ್ಯಾಪಕರು, ಬಿ.ಎ., ಎಮ್.ಎ. ಪದವೀಧರಾದ್ದರಿಂದ ಅಲ್ಲಿನ ಅಧ್ಯಾಪಕ ವೃಂದವು ಉತ್ತಮವಾಗಿದೆ.

**ಇಕ್ರಾ ಅರಬಿಕ್ ಶಾಲೆ, ಮಂಗಳೂರು**

ಮಂಗಳೂರು ನಗರ ಪ್ರದೇಶದಲ್ಲಿರುವ ಪ್ರಸಿದ್ಧ ಮದ್ರಸ. 2000ರಲ್ಲಿ ಸ್ಥಾಪನೆಗೊಂಡ ಈ ಮದ್ರಸದಲ್ಲಿ 140 ಗಂಡು ಮತ್ತು 60 ಹೆಣ್ಣು ಮಕ್ಕಳು ವ್ಯಾಸಾಂಗ ಮಾಡುತ್ತಿದ್ದಾರೆ.

**ವಿಶೇಷತೆಗಳು :**

- ಮದ್ರಸದಲ್ಲಿ ಕಲಿಯುತ್ತಿರುವ ಸರಿಸುಮಾರು ಎಲ್ಲಾ ಮಕ್ಕಳು ಅಲ್ಲಿಯೇ ಲೌಕಿಕ ವಿದ್ಯೆಯನ್ನು ಕಲಿಯುತ್ತಿದ್ದಾರೆ.
- 22 ಕೊಠಡಿ, ಲೈಬ್ರರಿ ಮತ್ತು ಸ್ವಚ್ಛವಾಗಿರುವ ಈ ಮದ್ರಸದಲ್ಲಿ ಕುಡಿಯಲು ಶುದ್ಧೀಕರಿಸಿದ ಬಿಸಿ ನೀರು ಲಭಿಸುತ್ತದೆ.
- ಅಲ್ಲಿನ ಮುಖ್ಯ ಶಿಕ್ಷಕರ ಮಾತಿನಂತೆ ಅಲ್ಲಿ ಹಿಫ್ಝ್ (ಕುರ್‌ಆನ್ ಕಂಠಪಾಠ) ಕಲಿಸಲು ಪ್ರತೀ 8 ವಿದ್ಯಾರ್ಥಿಗಳಿಗೆ ಓರ್ವ ಅಧ್ಯಾಪಕರಿದ್ದಾರೆ. ಹಾಗೆಯೇ ಶಾಲೆಗೆ ದಾಖಲಾಗಲು ಪ್ರವೇಶ ಪರೀಕ್ಷೆಯನ್ನೂ ನಡೆಸಲಾಗುತ್ತದೆ. ಅದರಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ ದೊರೆಯುತ್ತದೆ.
- ಸುಮಾರು 40 ವಿದ್ಯಾರ್ಥಿಗಳು ಹಿಫ್ಝ್ ಪೂರ್ಣಗೊಳಿಸಿದ್ದಾರೆ. ಅವರ ಪೈಕಿ ಹಲವರು ಊರಿನ ಪ್ರಮುಖ ವಿದ್ಯಾ ಸಂಸ್ಥೆಗಳಲ್ಲಿ ಕಲಿಯುತ್ತಿದ್ದಾರೆ. ಓರ್ವನು ಕೇರಳ ರಾಜ್ಯದ 12ನೇ ತರಗತಿಯ ಪರೀಕ್ಷೆಯಲ್ಲಿ ಇಡೀ ರಾಜ್ಯಕ್ಕೆ 6ನೇ ಸ್ಥಾನ ಗಳಿಸಿದ್ದ. ಆತ ಈಗ ಮೆಡಿಕಲ್ ಓದುತ್ತಿದ್ದಾನೆ.

**ಹೌಝೆ ಇಲ್‌ಮಿಯಾ ಬಾಕಿರುಲ್ ಉಲೂಂ, ಅಲೀಪುರ**

30 ಗಂಡು 25 ಹೆಣ್ಣು ಮಕ್ಕಳು ಕಲಿಯುವ ಒಂದು ವಿಶಾಲವಾದ ಮದ್ರಸವಿದು. ಇಲ್ಲಿ ಕಲಿಯುತ್ತಿರುವ ಎಲ್ಲಾ ಮಕ್ಕಳೂ ಲೌಕಿಕ ವಿದ್ಯೆಯನ್ನು ಹತ್ತಿರದ ಶಾಲೆಗಳಿಂದ ಪಡೆಯುತ್ತಿದ್ದಾರೆ. ವಿಶಾಲವಾದ ಆಟದ ಬಯಲು, ಗ್ರಂಥಾಲಯ. ವಾಸಿಸಲು ಉತ್ತಮ ವಸತಿ ಸೌಲಭ್ಯ ಇದರ ವಿಶೇಷತೆ.

**ವಿಶೇಷತೆಗಳು :**

- ಕಲಿತ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕಾಗಿ ಇತರ ದೇಶಗಳಿಗೆ ಕಳುಹಿಸುತ್ತಾರೆಂದು ಅಲ್ಲಿಯ ಮಕ್ಕಳೇ ಸಂತಸದಿಂದ ವಿವರಿಸುತ್ತಾರೆ.
- ಹೆಣ್ಣು ಮಕ್ಕಳಿಗೆ ದಾರುರ್ಝುಹ್‌ರ ಎಂಬ ಸುಂದರ ಕ್ಯಾಂಪಸ್ ವ್ಯವಸ್ಥೆ ಇದೆ.
- ಹೆಣ್ಣು ಮಕ್ಕಳಿಗಾಗಿ ಎಂಬ್ರಾಯಡರಿ, ಟೈಲರಿಂಗ್ ಮುಂತಾದ ವೃತ್ತಿಪರ ತರಬೇತಿಗಳನ್ನು ನೀಡಲಾಗುತ್ತದೆ. ಹಲವಾರು ವಿದ್ಯಾರ್ಥಿಗಳು ಸರಾಗವಾಗಿ ಕನ್ನಡ, ಇಂಗ್ಲೀಷ್ ಭಾಷೆಗಳನ್ನು ಮಾತನಾಡುತ್ತಾರೆ.
- ಎಸ್.ಎಸ್.ಎಲ್‌ಸಿ./ಪಿ.ಯು.ಸಿ. ಮತ್ತು ಬಿ.ಕಾಂ ವರೆಗಿನ ಲೌಕಿಕ ಶಿಕ್ಷಣವನ್ನು ಮಕ್ಕಳು ಈ ಸಂಸ್ಥೆಯಿಂದ ಪಡೆಯುತ್ತಿದ್ದಾರೆ.

**ಜಾಮಿಯಾ ಇಸ್ಲಾಮಿಯಾ, ಭಟ್ಕಳ್**

ಸುಮಾರು 1200ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ಕಲಿಯುವ ಈ ಮದ್ರಸವನ್ನು ರಾಜ್ಯದ ಅತೀ ದೊಡ್ಡ ಮದ್ರಸವೆಂದು ಕರೆಯಬಹುದು. ಬಹು ಸುಂದರವಾದ ಕ್ಯಾಂಪಸ್, ವಿಶಾಲವಾದ ಆಟದ ಬಯಲು, ಆಕರ್ಷನೀಯ ವಸತಿ ನಿಲಯ, ಸುಸಜ್ಜಿತ ಗ್ರಂಥಾಲಯ ಈ ಸಂಸ್ಥೆಯ ವಿಶೇಷತೆ. ಇದೊಂದು ಮಾದರಿ ಮದ್ರಸವೆಂದು ಕರೆಯಬಹುದು.

**ವಿಶೇಷತೆಗಳು :**

- ಕನ್ನಡ, ಇಂಗ್ಲೀಷ್, ಗಣಿತ, ಸಮಾಜ, ವಿಜ್ಞಾನ, ಕಂಪ್ಯೂಟರ್‌ನಂತಹ ಎಲ್ಲಾ ಲೌಕಿಕ ವಿಷಯಗಳನ್ನು ಇಲ್ಲಿ ಬೋಧಿಸಲಾಗುತ್ತದೆ.
- ಮದ್ರಸದಲ್ಲಿ ಕಲಿಯುವ ಕೊನೆಯ ವರ್ಷದ ವಿದ್ಯಾರ್ಥಿಗಳು ಸುಂದರವಾಗಿ ಅರಬಿ ಭಾಷೆಯಲ್ಲಿ ಸಂಭಾಷಣೆ ನಡೆಸುತ್ತಾರೆ.
- ಈ ಮದ್ರಸದಲ್ಲಿ ಕಲಿತಂತಹ ಮೌಲಾನ ಅಯ್ಯುಬ್ ನದ್ವಿ, ಮೌಲಾನ ಸಲ್ಮಾನ್ ನದ್ವಿ, ದೇಶದ ಪ್ರಮುಖ ಧಾರ್ಮಿಕ ಪಂಡಿತರಾಗಿ ಗುರುತಿಸಿ ಕೊಂಡಿದ್ದಾರೆ ಮತ್ತು ಕೆಲವರು ದುಬೈ, ಶಾರ್ಜಾ ಹೀಗೆ ಇತರ ದೇಶಗಳಲ್ಲಿ ಅರಬಿ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

**ದಾರುಲ್ ಉಮೂರ್ (ಟಿಪ್ಪು ಸುಲ್ತಾನ್ ಸ್ಟಡಿ ಆಂಡ್ ರಿಸರ್ಚ್ ಸೆಂಟರ್)**

ಶ್ರೀರಂಗ ಪಟ್ಟಣ ತಾಲೂಕಿನಲ್ಲಿ 2002ರಲ್ಲಿ ಸ್ಥಾಪನೆಗೊಂಡ ಈ ಮದ್ರಸವು ವಿಶಾಲವಾದ ಗ್ರಂಥಾಲಯ, ಕಂಪ್ಯೂಟರ್ ಲ್ಯಾಬ್, ಅತಿ ಸುಂದರ ಕ್ಯಾಂಪಸ್, ಕೈತೋಟ, ಶಾಂತ ವಾತಾವರಣ ಹೀಗೆ ಮುಂತಾದ ಸುಸಜ್ಜಿತ ವ್ಯವಸ್ಥೆಯಿಂದಾಗಿ ಈ ಮದ್ರಸವನ್ನು ಅಗ್ರ ಶ್ರೇಣಿಯಲ್ಲಿ ಕಾಣಬಹುದು. ಧಾರ್ಮಿಕ ಮತ್ತು ಲೌಕಿಕ ಶಿಕ್ಷಣದ ಸಮನ್ವಯವು ಈ ಮದ್ರಸದ ವಿಶೇಷತೆಗಳಲ್ಲೊಂದಾಗಿದೆ. ಆದರೆ ಇಲ್ಲಿ ಒಂದು ವರ್ಷದ ಡಿಪ್ಲೋಮ ಕೋರ್ಸ್‌ಗಳನ್ನು ಮಾತ್ರ ಕಲಿಸಲಾಗುತ್ತಿದೆ.

**ವಿಶೇಷತೆಗಳು :**

- ಆಲಿಮೀಯತ್ ಮತ್ತು ಫಝೀಲತ್ ಕಲಿತ ಮಕ್ಕಳಿಗೆ ಇಲ್ಲಿ ದಾಖಲಾತಿ ದೊರೆಯುತ್ತದೆ.
- ಇಲ್ಲಿನ ವಿದ್ಯಾರ್ಥಿಗಳಿಗೆ ಮದ್ರಸ ಮತ್ತು ಉರ್ದು ಶಾಲೆಗಳಲ್ಲಿ ಬೋಧಿಸಲು ಅವಕಾಶವನ್ನು ನೀಡಲಾಗುತ್ತಿದೆ.
- ಇತಿಹಾಸ, ಮ್ಯಾನೆಜ್‌ಮೆಂಟ್, ಇಸ್ಲಾಮಿಕ್ ಬ್ಯಾಂಕಿಂಗ್, ಇತರ ಧರ್ಮಗಳ ತುಲನಾತ್ಮಕ ಅಧ್ಯಯನದಂತಹ ಅತಿಥಿ ಉಪನ್ಯಾಸದಂತಹ ವೈವಿದ್ಯಮಯ ಪಠ್ಯ ಪದ್ಧತಿ ಈ ಮದ್ರಸದ ವಿಶೇಷತೆಯಾಗಿದೆ.

**ಶಿಫಾರಸ್ಸುಗಳು:**

- ಎಲ್ಲಾ ವಿಚಾರಧಾರೆಯವರನ್ನೊಳಗೊಂಡ ಸರಕಾರೇತರ ಒಂದು ಮದ್ರಸ ರೆಗ್ಯುಲೇಟಿಂಗ್ ಸಮಿತಿಯನ್ನು ರಚಿಸಬೇಕು.
- ಮದ್ರಸಗಳಿಗೆ ಉತ್ತಮ ಸೌಲಭ್ಯವನ್ನು ಒದಗಿಸುವ ನಿಟ್ಟಿನಲ್ಲಿ ಮದ್ರಸಗಳ ಕುರಿತು ಅಧ್ಯಯನ ನಡೆಸುವ ಕಮಿಟಿಯನ್ನು ಸ್ಥಾಪಿಸಬೇಕು.
- ವಿದ್ಯಾರ್ಥಿಗಳ ದೈಹಿಕ ಬೆಳವಣಿಗೆಗಾಗಿ ದೈಹಿಕ ಶಿಕ್ಷಕರ ನೇಮಕ, ಕ್ರೀಡಾ ಸಾಮಗ್ರಿಗಳ ಪೂರೈಕೆ ಮತ್ತು ವಿಶಾಲ ಆಟದ ಮೈದಾನಗಳನ್ನು ಒದಗಿಸಲು ಆಯಾ ಸಂಸ್ಥೆಯ ಹೊಣೆಗಾರರು ಈ ಕುರಿತು ಹೆಚ್ಚು ಗಮನ ಹರಿಸಬೇಕು. ಹಾಗೂ ಇಂಟರ್ ಮದ್ರಸ ಕ್ರೀಡೆಗಳಿಗೆ ಪ್ರೋತ್ಸಾಹ ನೀಡಬೇಕು.
- ಅರಬಿ ಕಲಿಕೆಗೆ ಹೆಚ್ಚು ಪ್ರೋತ್ಸಾಹ ನೀಡುವ ಅಗತ್ಯವಿದೆ. ವಿದ್ಯಾರ್ಥಿಗಳು ಮದ್ರಸ ಕ್ಯಾಂಪಸ್‌ನಲ್ಲಿ ಅರಬಿಯಲ್ಲೇ ಮಾತನಾಡುವ ಪರಿಪಾಠವನ್ನು ಪ್ರಾರಂಭಿಸಬೇಕು.
- ವಿಶ್ವವಿದ್ಯಾಲಯದಲ್ಲಿ ಅರಬಿ ಅಧ್ಯಯನ ಪೀಠವನ್ನು ಪ್ರಾರಂಭಿಸಬೇಕು. ಕರ್ನಾಟಕದ ಎಲ್ಲಾ ವಿಶ್ವವಿದ್ಯಾಲಯಗಳು 3 ವರ್ಷದ ಬಿ.ಎ. ಇನ್ ಅರೇಬಿಕ್ ಕೋರ್ಸನ್ನು ಪ್ರಾರಂಭಿಸಬೇಕು. ಈ ಕೋರ್ಸ್‌ಗಳಲ್ಲಿ ಮದ್ರಸ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬೇಕು. ತದನಂತರ ಎಮ್.ಎ. ಕೋರ್ಸ್ ಕೂಡಾ ಪ್ರಾರಂಭಿಸಬೇಕು.
- ಮದ್ರಸಗಳಲ್ಲಿ ಗಣಿತ, ವಿಜ್ಞಾನ, ಸಮಾಜ, ಕನ್ನಡ ಮತ್ತು ಕಂಪ್ಯೂಟರ್ ಮುಂತಾದ ವಿಷಯಗಳ ಪ್ರಾಥಮಿಕ ಜ್ಞಾನವನ್ನು ಕಡ್ಡಾಯವಾಗಿ ಬೋಧಿಸಬೇಕು.
- ಮದ್ರಸಗಳಲ್ಲಿ ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಬೇಕು.
- ಮದ್ರಸಗಳಲ್ಲಿ ಕನ್ನಡ ಮತ್ತು ಇಂಗ್ಲೀಷ್ ಭಾಷೆಯನ್ನು ಕಡ್ಡಾಯಗೊಳಿಸಬೇಕು.
- ಮದ್ರಸಗಳಲ್ಲಿ ಪಥವೀದರ ಪರಿಣಿತ ಶಿಕ್ಷಕರನ್ನು ನೇಮಿಸಬೇಕು.
- ಮದ್ರಸಗಳಲ್ಲಿಯೂ ಪ್ರತಿಭಾ ಕಾರಂಜಿಯಂತಹ ಕಾರ್ಯಕ್ರಮಗಳನ್ನು ರಾಜ್ಯಮಟ್ಟದಲ್ಲಿ ನಡೆಸಬೇಕು.
- ಮದ್ರಸಗಳಲ್ಲಿ ಇತರ ವಿದ್ಯಾಸಂಸ್ಥೆಗಳಂತೆಯೇ ಪದವಿ ಕೋರ್ಸುಗಳಿಗೆ(ಆಲೀಮಿಯತ್) ಕಾಲ ಮಿತಿಯನ್ನು ನಿಗದಿ ಪಡಿಸಬೇಕು.
- ಮದ್ರಸಾ ಅಧ್ಯಾಪಕರಿಗೆ ಕನಿಷ್ಠ ರೂ.15,000 ವೇತನ ನಿಗದಿ ಮಾಡಬೇಕು.

❖ ❖ ❖

# A STUDY ON MADRASA EDUCATION

Madrasa in Arabic means school. Saudi Arabia and in Arab countries school is termed as Madrasa. Today Madrasa is the most maligned term. There may be many reasons for it. However Madrasa was the cradle of new inventions nay new civilization during the middle ages. In our country too the contribution of Madrasa towards educational and political revival cannot be denied. It was the springboard of freedom movement. It was the abode of intellectuals, poets, writers and revolutionaries.

While the Madrasa initiated the new renewal and harbinger of inventions it is regrettable for having secluded the institutions today as the mere provider of religious teachings. It wouldn't be an exaggeration if we say that it has lost its pristine glory and its true status! According to a Karnataka Government assessment there are more than 960 Madrasas in our State. In this survey probably Maktabs (Madrasa meant for small children) are also included. And Pallidars attached to Masjids might not be included in those surveys. Therefore it is difficult to admit the survey of the government as accurate.

In this direction, Students Islamic Organization of India having conducted a survey of 29 Madarasas published a report in the past. As the next phase of endeavor, it has conducted a survey of 55 chosen Madarasas covering diverse schools of thought in different districts. In order to motivate other Madarasas based on the survey and to initiate healthy discussions on this subject we have planned to felicitate 6 model Madarasas imparting high quality education. In this survey based on the infrastructure and community participation, teaching environment, innovative activities, faculty, integration of secular and religious education those securing 90% and above are graded as

A+, those securing 80% and above as A, those securing 70% and above as B+, those securing 60% and above as B and those scoring below 60% is graded as 'C'. Further those Madrasas possessing infrastructure like water, good food, playing ground, residential facility, the availability of teaching and non-teaching facility, clean environment,etc are awarded 60 marks, those Madrasas providing a semblance of secular and religious education will be awarded 70 marks, apart from which if there are sports equipments, library, computer education and first aid facilities 80 marks are awarded and those having innovative activities, expert faculty, language training, physical education and well ordained campus 90 marks are awarded.

Our representatives having visited various Madarasas across the state and by collecting the opinions of people on teachers and pupils of those Madarasas have examined an assessed the information to arrive at the following submissions.

- There is absence of basic infrastructure facilities in many of the Madarasas.
- There is low self-esteem found among many of those pursuing studies including the faculty. After learning in such Madarasas they felt that they may have to serve in Masjids and Madarasas where they may be paid lesser honorariums. As they keep away from the public domain they are cut off from the social mainstream.
- The negative image created by the media regarding Madarasas has infused a state of fear and concern among students. The enigma remaining behind these Madarasas are portrayed to create an atmosphere of fear or terror! By relaying misconceptions round the clock people are brainwashed to hate these poor souls!

  When our representatives visited a prestigious Madarasa in Hubli, the principal confided a sad event before them. Every week the personnel from Intelligence Bureau and Police Department visit to inspect the attendance rolls and examine the class rooms. As the police visit often, the students who come to the Madarasa come with a feeling of apprehension and fear! Due to this constant intimidation, there is not only significant reduction in student admission; even the parents are hesitant to visit the Madarasa for the fear of social standing!
- There is no encouragement for physical sports. Most of the Madarasas lack suitable playgrounds. Even few of those having are not being used. Or there are no physical education teachers to train them. Thus, community leaders have to deliberate over this matter and promote sports among Madarasa students.
- There is lack of residential facilities in many Madarasas. For example, when 20 pupils are housed for sleep in a small room it reflects the sorry state of affairs.

**Course Time Duration:**

As per our understanding different syllabus are taught in Madarasas. In some Madarasas Aleemiyath Degree duration is kept as 6 years, it may be 10 to 12 years in certain other Madarasas. In some Madarasas the girls are imparted Dayee, Muhmin, and Fahmul Quran courses within 2, 3 or 4 years. In these courses tailoring or calligraphy is also included as a vocational subject. Hence it is advisable to reduce the course duration of boys too! We discussed on this aspect with many religious leaders. However we are not getting any concrete answers. They are adhering to the conventional modes of education. However when we had a discussion with Maulana Salim Nadvi of Iqra Arabic School, Mangalore he opined “we have assessed where the students time is wasted, so we shift to secular education to bridge the gaps, our students have progressed in both secular and religious domains, Thus we have discovered a balanced learning model”.

When we look at Madarasas in Karnataka, there are lots of students pursuing BA (aleemiyath) courses. But those pursuing MA Arabic are rare. One or two are appearing for MA (Arabic) of Madras University. It is really sorry state of affairs to know that there aren’t any facilities to pursue post graduation in Arabic or Aleemiyath since most of the universities do not recognize the BA (Aleemiyath)! There is no arrangement to teach Arabic at these Universities. As such, there is an immediate need to commence BA (Arabic or Aleemiyath) courses in our universities in line with Kerala Universities. At the same time, arrangements should be made to commence post graduation courses too. By organizing to commence the Arabic Studies chairs under all the universities of Karnataka many of the present ills of the system stands mitigated.

**Faculty:**

The student faculty ratio is in good proportion. However among the faculty there is deficiency of secular learning. Limiting themselves with religious learning, they have kept away from social and contemporary knowledge. This in turn affects the Madarasa students who assimilate pure religious knowledge without added social perspectives.

While we look at the above problems besetting education, it really saddens us further to learn that the faculty is the most underpaid lot. In rural areas their honorarium is limited to mere Rs.3000. Even in urban areas they may get a modest pay of Rs.5 to 8 thousands! It is very difficult to lead their lives with this meager salary. It is also recommended to fix a salary of minimum Rs. 15000.

**Cleanliness:**

If we are talking about cleanliness at Madarasas, we regret that many of the Madarasas

where we conducted the surveys were in a sorry state as far as cleanliness is concerned.

In Bidar and Raichur at the girls Madarasas there was heavy stench emanating from the open drainage. When we inquired about this with the manager of the institution, he said that in spite of his complaints to the local councilor nothing has been done! Those who teach “Cleanliness is the better part of the religion” fail to infuse in children the relevance of teachings.

It is a known fact that only love and empathy contributes to a good education. Islam does not encourage punitive action for pursuit of knowledge or education. It is childish to say that in order to acquire religious knowledge punishment is inevitable! There is not a single instance where the greatest teacher of all Prophet Muhammad (S) having inflicted punishment on any of his Revered companions or those who came in contact with him.

**Percentage wise statistics of Infrastructure facilities at 55 Madarasas**

- Libraries - 21.81%
- First aid kits - 12.72%
- Innovative learning - 9.09%
- Computer - 18.18%
- Drinking water facilities - 72.72%
- English language learning - 43.68%
- Maths, science and social studies - 18.18%
- Kannada Language - 43.63%
- Own Building - 82.85%
- Well integrated furniture - 50.90%
- Playing ground - 41.81%
- Physical Education teacher - 10.90%
- Sports equipments - 23.63%

**Ranking information of 55 Madarasas:**

| Score | Number of Madarasas | Rank |
|---|---|---|
| 90 | 0 | A+ |
| 80 | 4 | A |
| 70 | 4 | B+ |
| 60 | 9 | B |
| 50 | 38 | C |

## A FEW ROLE MODELS:

### Madarasa Baithul Uloom, Sindagi

In the Madarasa based in Sindagi at Bijapur district 400 girls and 200 boys are pursuing education. Here there is spacious playground; good library, computer laboratory and other facilities are available. English, Kannada, Science, mathematics, social science is taught with a well-integrated curriculum of secular and religious learning is the unique trait of this institution.

**Special characteristics:**

- There is separate arrangement for girls and boys with equal emphasis on quality education for both the sexes.
- Here language is taught as a special skill. Because of which 3rd and 4th standard students are able to read and write Urdu legibly. They are also taught Kannada and English simultaneously.
- 400 girls are spread over 22 classrooms with 25 faculties attending to them. Similarly 200 boys are spread over 16 class rooms and 20 faculties attend to their needs. On an average for 18 female children one classroom and for 16 children one faculty. Similarly for 12 boys one classroom and for 10 children the facility of one faculty is available.
- Admissions open throughout the year. As such, opportunity of education is kept open without depriving it to any child.
- Though the curriculum of the Madarasa is designed for 8 years, those bright students are provided the opportunity of finishing same within a span of 5 years.

If one assesses the cleanliness aspects, compared to other Madarasas this Madarasa has placed much importance for cleanliness.

**Madarasa Ziya-ul-Uloom, Kandlur**

Madarasa at a place called Kandlur at Kundapur taluk has its own building, a vast playground, a well-facilitated library and a peaceful campus draws our attention. There are 12 faculties for 120 children which means for every 10 children one faculty is available.

**Special Characteristics:**

- 30 students are pursuing BA studies from MANU
- There is facility of reading English and Kannada newspapers
- Those pursuing final year Aleemiyath are able to converse in Arabic.
- In order to impart creative writing among Madarasa students a weekly wall magazine is published.
- Debates are arranged on contemporary social and political issues.
- Faculty being drawn from MA and BA are well disposed to guide students.

**Iqra Arabic School, Mangalore**

A well-known Madarasa at the heart of Mangalore. Established in 2000 this Madarasa has 140 boys and 60 girls.

**Special characteristics:**

- Those pursuing religious learning at the Madarasa are also provided the opportunity of secular education.
- 22 classrooms, library in a placid environment. Clean drinking water is provided.
- According to the head of the Institution for every 8 Hifz (memorization of Holy Quran) students one faculty is provided. There will be admission test for aspiring students.
- 40 students have completed Hifz courses. Among them many are pursuing studies in prominent institutions. A student pursuing 12th standard studies at Kerala has secured 6th rank in the state. Now he has secured admission to MBBS.

**Houze- Ilmiya-Baqirul-Uloom, Alipur**

This is a spacious Madarasa imparting education to 30 boys and 25 girls. Those pursuing religious education here further pursue secular education from the nearest schools. A vast playground, a library, a good residential facility is the specialty of this institution.

**Special characteristics:**

- Those completing education at this Madarasa are sent overseas for higher education.

- There is a separate beautiful campus "Daruzahra"for girls.
- Girls are provided professional training in embroidery, tailoring, etc. Most of the students converse in Kannada and English languages.
- Students are imparted SSLC, PUC and B.com learning.

**Jamiya Islamiya, Bhatkal**

This Madarasa having more than 1200 students is said to be the largest Madarasa in the state. A beautiful campus, vast play ground, well designed hostels, well stocked library highlights of this institution. This may be called as Model Madarasa.

**Special characteristics:**

- Kannada, English, mathematics, social science, science, computer is taught thus covering secular education.
- Those studying in final year are well versed in Arabic language conversation.
- Prominent ulamas such as Maulana Ayyub Nadwi, Maulana Salman Nadwi recognize themselves as the aluminums of this Institution. Many others serve as faculty in Dubai, Sharjah and other Middle Eastern Countries.

**Darul Umoor (Tipu Sulthan Study and Research Center)**

The Madarasa which commenced in 2002 at Srirangapatna has a spacious library, computer laboratory, a beautiful campus, garden thus placing itself as a premier Madarasa. The integration of religious and secular learning is one of the major specialties of this Madarasa. Here only one year Diploma course is taught.

**Special characteristics:**

- Those having Aleemiyath and Fazeelath eligibility are admitted.
- The students undergo special assignment as teaching faculty in Urdu schools and other Madarasas.
- History, Management studies, Islamic Banking, inter-religious studies, Guest Lectures from prominent figures, etc thus projecting a diverse curriculum is the highlight of this Madarasa.

**RECOMMENDATIONS:**

- To establish a non-governmental Madarasa regulating body constituting all schools thought.
- A committee to study the infrastructure requirements of Madarasas has to be established.
- To appoint physical education teachers, providing sports equipments and to ensure sufficient play grounds has to be given prominence. Inter madrasa sports must be encouraged.
- Arabic learning must be encouraged. Students must be encouraged to speak and converse in Arabic within the campus.
- As Arabic attains prominence even in terms of the geo-political situation of Middle Eastern and African countries including all Muslim countries, the Government must make provision to include Arabic second and third slots of language selections.
- Arabic studies Chair has to be opened in all the Universities. All the Universities in Karnataka should commence BA in Arabic courses. Madarasa students must be made eligible to join these courses. MA courses must be commenced as a follow up for these courses.
- The teaching of mathematics, science, social studies, Kannada and computer education must be made compulsory in Madarasas.
- There must be provision to hold social and cultural functions at Madarasas.
- Teaching of Kannada and English language to be made compulsory.
- Graduate trained teachers who are having Religious degrees may be appointed as faculty.
- Prathibha Karanji programmes organized by the Government of Karnataka at the state level may be extended to the Madarasas.
- Time duration has to be fixed for the graduation course (aleemiyath), like all other educational institutions.
- To fix a salary of minimum Rs. 15000 for the teachers.

❖ ❖ ❖

MEDIA WATCH

**Students Islamic Organisation of India, Karnataka**
Jnana Kendra, #7, SRK Garden, Jayanagar East, Bangalore- 560041
Ph: 080 26646861 siokarzone@gmail.com www.sio-india.org